ನಾಟಕದ ಮೂಲಕ ಪ್ರಜಾಪ್ರಭುತ್ವದ ಅನ್ವೇಷಣೆ

ಸನ್ಯುಕ್ತಾ ಸಹಾ ಮತ್ತು ದೇವಿಕಾ ಬೇಡಿ

ಮೊಘಲರ ದೊರೆ ಅಕ್ಬರ್‌ಗೆ ತನ್ನನ್ನು ಬಿಟ್ಟರೆ ಬೇರೆ ಯಾರೂ ತನಗೆ ಸಮಾನರು ಇಲ್ಲ ಎನ್ನುವ ಭಾವನೆ ತಲೆಯಲ್ಲಿ ತುಂಬಿಕೊಂಡಿತ್ತು. ಈ ಜಗತ್ತಿನಲ್ಲಿರುವ ಎಲ್ಲವೂ–ಹುಲ್ಲಿನ ಎಸಳು, ಪರ್ವತ, ಇಟ್ಟಿಗೆ, ನಗರ ಸೇರಿದಂತೆ ಎಲ್ಲವೂ ತನ್ನದು ಎಂದುಕೊಳ್ಳಲಾರಂಭಿಸಿದ! ಒಂದು ದಿನ ಸಂಜೆ ಅರಮನೆ ಅಂಗಳದಲ್ಲಿ ವಾಯುವಿಹಾರ ಮಾಡುತ್ತಿದ್ದಾಗ, ದಾರಿಗೆ ಅಡ್ಡಲಾಗಿ ಮಲಗಿದ್ದ ದೊಡ್ಡವಸ್ತುವೊಂದನ್ನು ಎಡವಿ ಬೀಳುವುದರಲ್ಲಿದ್ದ. ನೋಡಿದರೆ, ಆತನೊಬ್ಬ ವೃದ್ಧ ಸಾಧು. ಸಿಟ್ಟಿಗೆದ್ದ ರಾಜ, ಆತನನ್ನು ಒದ್ದು ಹೊರಹಾಕಲು ಪ್ರಯತ್ನಿಸಿದ. ಆದರೆ, ಸಾಧು ಕೆರಳಲಿಲ್ಲ. ಇದರಿಂದ ರಾಜನ ಸಿಟ್ಟು ಇನ್ನಷ್ಟು ಹೆಚ್ಚಾಯಿತು ಆ ವೃದ್ಧ ಸಾಧು ಜಗತ್ತಿನ ಬಗ್ಗೆ ರಾಜನಿಗೆ ಹೀಗೆ ಹೇಳಿದ, 'ಈ ಜಗತ್ತಿನಲ್ಲಿ ಅಸಂಖ್ಯಾತ ಜನರು ಇದ್ದು, ಮಹಾರಾಜ ಸೇರಿದಂತೆ ಯಾರೂ ಮುಂದಿನ ಜನ್ಮಕ್ಕೆ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ. ಎಲ್ಲರೂ ಈ ಜಗತ್ತಿಗೆ ಪ್ರಯಾಣಿಕರಂತೆ ಬರುತ್ತಾರೆ ಹಾಗು ತೆರಳುತ್ತಾರೆ'. ಸಾವಧಾನವಾಗಿ ಆಲೋಚಿಸಿದ ಬಳಿಕ, ಅಕ್ಬರನಿಗೆ ಸಾಧುವಿನ ಮಾತುಗಳಲ್ಲಿ ಬೆಳಕು ಕಾಣಲಾರಂಭಿಸಿತು. ಆ ಸಾಧು ಮಾರುವೇಶವನ್ನು ತೆಗೆದ. ಆತ ಬೇರೆ ಯಾರೂ ಅಲ್ಲ, ಅಕ್ಬರನ ಪ್ರೀತಿಪಾತ್ರ ವಿದೂಷಕ–ಬೀರಬಲ್‌ನಾಗಿದ್ದ!. ಅಕ್ಬರ ಪೆಚ್ಚಾದ.

ರಂಗಭೂಮಿಯ ನಟ ಸಫ್ದರ್ ಹಶ್ಮಿ ಈ ಕತೆಯನ್ನು ಮಕ್ಕಳ ಕವಿತೆ 'ದುನಿಯಾ ಸಬ್‌ಕಿ'ಯಾಗಿ ಪರಿವರ್ತಿಸಿದ್ದು, ಸಫ್ದರ್ ಹಶ್ಮಿ ಸ್ಮಾರಕ ಟ್ರಸ್ಟ್ (ಸಹ್‌ಮತ್) ಪ್ರಕಟಿಸಿದ ಇದೇ ಹೆಸರಿನ ಕವನ ಸಂಕಲನದಲ್ಲಿ ಸೇರಿದೆ. ಈ ಸಂಕಲನವು ಆಗಾಝ್ ಥಿಯೇಟರ್ ಟ್ರಸ್ಟ್‌ನ ಬುನಾದಿ ಹಾಗು ಮಾರ್ಗದರ್ಶಿಯಾಗಿದೆ. ಇದು ನಾಟಕವನ್ನು ಒಂದು ಪ್ರದರ್ಶನ ಪ್ರಕ್ರಿಯೆಯಾಗಿ ಮಕ್ಕಳಿಗೆ ಮತ್ತು ಹದಿವಯಸ್ಸಿನವರಿಗೆ ಬಳಸುತ್ತದೆ. ಪೌರತ್ವ ಎನ್ನುವುದು ಒಂದು ಪ್ರಶ್ನಿಸುವ ಪ್ರಕ್ರಿಯೆಯಾಗಿದೆ, ರಂಗದಿಂದಾಚೆಗೂ ಅದೇನಾಗಿರಬೇಕೆಂದು ಶೋಧಿಸುವುದಾಗಿದೆ.

ದುನಿಯಾ ಸಬ್‌ಕಿ ಏಕೆ?

ವ್ಯಕ್ತಿಯೊಬ್ಬರು ಯಾವುದೇ ವಿಭಾಗೀಕರಣಕ್ಕೆ ಒಳಗೊಂಡಿರಲಿ, ದೇಶವೊಂದರ ನಿವಾಸಿಯಾಗಿರುವವರು ಹಾಗೂ ಅದು ಕೊಡಮಾಡುವ ಹಕ್ಕು ಮತ್ತು ಸವಲತ್ತುಗಳನ್ನು ಅನುಭವಿಸುತ್ತಿರು–ವವರು ಆ ದೇಶದ ಪೌರರಾಗಿರುತ್ತಾರೆ. ಎಲ್ಲಾ ಪೌರರಿಗೂ ರಾಜ್ಯವು ನ್ಯಾಯ, ಸ್ವಾತಂತ್ರ್ಯ, ಸಮಾನತೆ ಹಾಗು ಭ್ರಾತೃತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವಂತೆ ಮಾಡುವ ಕ್ರಿಯಾಶೀಲ ಜವಾಬ್ದಾರಿ ಹೊಂದಿರುತ್ತದೆ. ವೈವಿಧ್ಯಮಯ ಅಸ್ಮಿತೆ, ದೃಷ್ಟಿಕೋನ ಹಾಗು ಆಸಕ್ತಿಗಳನ್ನು ಹೊಂದಿರುವ ಸಮಾಜದಲ್ಲಿ ಸಂವಾದದಿಂದ ಮಾತ್ರ ಸಕಾರಾತ್ಮಕ ಕ್ರಿಯೆ ಸಾಧ್ಯವಿದೆ. ಸಂವಾದವು ಪರಿಣಾಮಕಾರಿ ಆಗಬೇಕಾದರೆ, ವ್ಯಕ್ತಿಗಳ ಮತ್ತು ಸಮುದಾಯದ ಕಲ್ಪನೆ, ಕುತೂಹಲ ಹಾಗು ತಾರ್ಕಿಕ ಚಿಂತನೆಯನ್ನು ಪೋಷಿಸುವ ಅವಕಾಶವಿರಬೇಕು. ರಂಗಭಾಷೆಯ ಮೂಲಕ ಅಂಥ ಅವಕಾಶಗಳನ್ನು ಸೃಷ್ಟಿಸುವುದು ಆಗಾಝ್‌ನ ಉದ್ದೇಶ.

ದುನಿಯಾ ಸಬ್‌ಕಿ 2010ರಲ್ಲಿ ನಾವು ಸೃಷ್ಟಿಸಿದ ಮೊದಲ ನಾಟಕ. ಆಗಿನ್ನೂ ಆಗಾಝ್ ಒಂದು ಪ್ರತ್ಯೇಕ ಅಸ್ತಿತ್ವವನ್ನು ಹೊಂದಿರಲಿಲ್ಲ. ಈ ನಾಟಕವನ್ನು ರಂಗಶಿಕ್ಷಣದ ಭಾಗವಾಗಿ ಪ್ರದರ್ಶಿಸತೊಡಗಿದ ನಂತರ ನಟರ ಕತೆಗಳು ಬದಲಾಗುತ್ತಲೇ ಇದ್ದುದರಿಂದ ಪ್ರತಿಯೊಂದು ಬಾರಿಯೂ ನಾಟಕ ಹೊಸತನದಿಂದ ಕೂಡಿರುತ್ತಿತ್ತು. ಪ್ರತಿಬಾರಿಯೂ ನಟರು ಆ ಕ್ಷಣದಲ್ಲಿ ಅವರ ಬದುಕಿಗೆ ಪ್ರಸ್ತುತವಾದ, ವೈಯಕ್ತಿಕ ಕಥನಗಳನ್ನು ತರುತ್ತಿದ್ದರು. ಆನಂತರ ನಾಟಕಗಳು ವ್ಯಕ್ತಿಗಳ ಧ್ವನಿಗಳನ್ನು ಅರ್ಥ ಮಾಡಿಕೊಳ್ಳುವ ಹಾಗು ಇತರರೊಂದಿಗೆ ಹಂಚಿಕೊಳ್ಳುವ ಮಾರ್ಗವಾಗಿ ಬದಲಾದವು. ಈ ರೀತಿಯ ಕ್ರಿಯಾಶೀಲತೆಯು ಸಕ್ರಿಯ ಪೌರರಾಗುವತ್ತ ಸಂವಾದ ಆರಂಭಿಸುವ ಧೈರ್ಯದ ನಡೆಯಾಗಿದೆ. ಕಳೆದ ಕೆಲವು ವರ್ಷಗಳಲ್ಲಿ, ಈ ನಾಟಕವನ್ನು ಹಲವು ಯುವಜನರೊಂದಿಗೆ ಸೇರಿ ವಿಭಿನ್ನ ಸಂದರ್ಭಗಳನ್ನು ಮರುಸೃಷ್ಟಿಸಿದ್ದೇವೆ. ಇಂಥ ಏಳರಿಂದ ಹತ್ತು ದಿನ ನಡೆಯುವ ಕಾರ್ಯಾಗಾರಗಳಲ್ಲಿ ದುನಿಯಾ ಸಬ್‌ಕಿಯ ಹಲವು ಹೊಸ ಪ್ರಯೋಗಗಳು ಹೊರಹೊಮ್ಮಿವೆ ಹಾಗು ಬೇರೆಬೇರೆ ಮಕ್ಕಳ ಪ್ರತ್ಯೇಕ ಕಥೆಗಳಿಗೆ ಅಭಿವ್ಯಕ್ತಿ ಸಿಕ್ಕಿದೆ.

ಈ ಲೇಖನದಲ್ಲಿ ನಾವು ನಮ್ಮ ಎರಡು ಅನುಭವಗಳನ್ನು ಹಂಚಿಕೊಳ್ಳುತ್ತೇವೆ: ಮೊದಲನದು ಶ್ರೀನಗರದ ದಿಲ್ಲಿ ಪಬ್ಲಿಕ್ ಶಾಲೆಯ 7–9ನೇ ತರಗತಿಯ 40 ವಿದ್ಯಾರ್ಥಿಗಳ ಜೊತೆಗಿನ ಕಾರ್ಯಾಗಾರ (2017) ಹಾಗೂ ಮತ್ತೊಂದು ಶೇಖ್ ಸರಾಯ್/ಚಿರ್ಕಿ ಗ್ರಾಮ (ವಲಸೆ ಬಂದವರು ಹೆಚ್ಚು ಸಂಖ್ಯೆಯಲ್ಲಿರುವ, ಜನದಟ್ಟಣೆಯ ನಗರ ಪ್ರದೇಶ)ದ ಸಮುದಾಯ ಗ್ರಂಥಾಲಯ ಯೋಜನೆಯ 9–12 ವರ್ಷ ವಯಸ್ಸಿನ 18 ಮಕ್ಕಳ ಜತೆಗಿನ ಅನುಭವ (2018).

ಉಪಕ್ರಮದ ಆರಂಭ:

ಶ್ರೀನಗರದ ಗುಂಪು ತಮ್ಮ ಶಾಲೆಯಲ್ಲಿ ಕಲೆಗೆ ಹೆಚ್ಚು ಪ್ರಾಧಾನ್ಯ ನೀಡಿತ್ತು. ಇಲ್ಲಿ ನಾವು ಪರಸ್ಪರ ಹೆಸರು ತಿಳಿದುಕೊಳ್ಳುವ ಮೊದಲೇ ಒಟ್ಟಿಗೆ ಆಟ ಆಡುವ ಮೂಲಕ ಕಾರ್ಯಕ್ರಮವನ್ನು ಆರಂಭಿಸಿದೆವು. ಇದರಿಂದ ನಾವೆಲ್ಲರೂ ಒಬ್ಬರು ಇನ್ನೊಬ್ಬರ ಜೊತೆ ಬೆರೆಯಲು ಇರಬಹುದಾದ ಹಿಂಜರಿಕೆಗಳನ್ನು ತೊರೆದೆವು ಮತ್ತು ಆಟವು ಹಂಚಿಕೊಳ್ಳುವ ಸಾಧ್ಯತೆಗಳಿಗೆ ದಾರಿ ಮಾಡಿಕೊಟ್ಟಿತು. ಇನ್ನೊಂದೆಡೆ, ಶೇಖ್ ಸರಾಯಿನ ಸಮುದಾಯ ಗ್ರಂಥಾಲಯದ ಸದಸ್ಯರು ಮೂಲಭೂತ ಕಲಾ ಸೌಲಭ್ಯಗಳಿರುವ ಶೈಕ್ಷಣಿಕ ಸಂಸ್ಥೆಗಳ ಜೊತೆಗೆ ಕೆಲಸ ಮಾಡುತ್ತಿದ್ದರು. ಕಿರಿದಾದ ತಳಮಹಡಿಯನ್ನು ಎಲ್ಲರೂ ಸೇರಿ ಸ್ವಚ್ಛಗೊಳಿಸಿ, ಎಲ್ಲ ಕ್ರೀಡಾ ಚಟುವಟಿಕೆಗಳಿಗೆ ಬಳಸಲಾಯಿತು. ಇದು ಆನಂತರ ಆರಂಭಿಸಿದ ಕಾರ್ಯಾಗಾರದ ವಿಷಯ ಮಾಲೀಕತ್ವದ ಭಾವನೆಯನ್ನು ಎಲ್ಲರಲ್ಲೂ ಮೂಡಿಸಿತು.

ಒಂದು ಗುಂಪಾಗಿ ಬಿಂಬಿಸಿಕೊಳ್ಳಲು ಪ್ರತಿ ಸಭೆಯನ್ನೂ ವೃತ್ತಾಕಾರವಾಗಿ ಕುಳಿತುಕೊಳ್ಳುವ ಮೂಲಕ ಆರಂಭಿಸುತ್ತಿದ್ದೆವು; ಇದು ಒಂದು ಕ್ರಮವಾಗಿ ಗುಂಪನ್ನು ಒಟ್ಟುಗೂಡಿಸುವ ದಾರಿಯೊಂದನ್ನು ಸೃಷ್ಟಿಸಿತು. ವೃತ್ತಕಾರದಲ್ಲಿ ಪ್ರತಿಯೊಬ್ಬರೂ ಮತ್ತೊಬ್ಬರನ್ನು ನೋಡಬಹುದು ಹಾಗು ತಾವು ಕೂಡ ಕಾಣಿಸಿಕೊಳ್ಳುವುದರಿಂದ, ಅದು ಎಲ್ಲರ ಉಪಸ್ಥಿತಿಯಿರುವ ಸಂಗ್ರಾಹಕದಂತೆ ಆಗುತ್ತದೆ. ವೃತ್ತವು ಪರಸ್ಪರ ಸಂಬಂಧವಿರುವ ರಚನೆಯ ಪ್ರತಿಫಲನವಾಗುತ್ತದೆ. ವೃತ್ತದಲ್ಲಿ ಯಾರೊಬ್ಬರೂ ಮುಂದೆ, ಮಧ್ಯದಲ್ಲಿ ಅಥವಾ ಕೊನೆಯಲ್ಲಿ ಇರುವುದಿಲ್ಲ ಮತ್ತು ಎಲ್ಲರ ಸಮ್ಮತಿಯು ಅದಕ್ಕೊಂದು ರೂಪ ಕೊಡುತ್ತದೆ.

ಸಹ–ಮಾಲಿಕತ್ವದ ಈ ಭಾವನೆಯು ಹದಿವಯಸ್ಸಿನಿಂದಲೂ ಇಂಥ ಸಭೆಗಳನ್ನು ನಡೆಸಿಕೊಡುತ್ತಿದ್ದ ಆಗಾರ್ಖ಼ನ ರೆಪರ್ಟರಿಯ ಸದಸ್ಯರಿಂದ ಮರುಸ್ಥಿರೀಕರಿಸಲ್ಪಟ್ಟಿತು. ಮಕ್ಕಳು / ಹದಿವಯಸ್ಸಿ–ನವರು ತಮ್ಮದೇ ವಯಸ್ಸಿನವರೊಂದಿಗೆ ಪ್ರಕ್ರಿಯೆಯೊಂದನ್ನು ನಡೆಸುವಾಗ, ಇದು ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಅಭಿಪ್ರಾಯಗಳನ್ನು ಬದಲಾಯಿಸುತ್ತದೆ. ಈ ಪ್ರಕ್ರಿಯೆಯಲ್ಲಿ ತಪ್ಪುಗಳನ್ನು ಮಾಡುತ್ತಲೇ, ಆಲೋಚನೆಗಳನ್ನು ಸಂತೋಷದಿಂದ ಒಪ್ಪಿಕೊಳ್ಳುವ ಹಾಗು ಅವುಗಳನ್ನು ರೂಪುಗೊಳಿಸುವ ಸಾಧ್ಯತೆಗಳು ಅಧಿಕಗೊಳ್ಳುತ್ತವೆ. ಆ ಮೂಲಕ ಒಂದು ಸಾಮಾನ್ಯ ವೇದಿಕೆಯೊಂದು ಹೊರಹೊಮ್ಮುತ್ತದೆ. ಕಾರ್ಯಕ್ರಮದ ಗುಣಮಟ್ಟ ಹಾಗು ಆ ಮೂಲಕ ಕಂಡುಕೊಂಡ ಕತೆಗಳು ಕೂಡ ಬದಲಾಗುತ್ತವೆ.

ಪರಿಶೋಧನೆಗೆ ಉತ್ತೇಜನ:

ನಾಟಕವು ಒಂದು ಪ್ರಕ್ರಿಯೆಯಾಗಿ ಸೃಷ್ಟಿಯೊಂದರ ಕಡೆಗೆ ಸಾಗಲು, ಹಲವು ಉತ್ತೇಜಕಗಳನ್ನು ಬಳಸಿಕೊಳ್ಳುತ್ತದೆ. ಶ್ರೀನಗರ ಹಾಗು ಶೇಖ್ ಸರಾಯಿ ಎರಡರಲ್ಲೂ ನಾವು ಸೃಜನಶೀಲ ಪ್ರಕ್ರಿಯೆ–ಯೊಂದಿಗೆ ಸಂಧಾನ ನಡೆಸಲು ಪ್ರಶ್ನೆಗಳು ಮತ್ತು ಪಠ್ಯವನ್ನು ಬಳಸಿಕೊಂಡೆವು. ಈ ಎರಡೂ ಇತರರ ಅನುಭವಗಳೊಂದಿಗೆ ನಮ್ಮ ಅನುಭವಗಳನ್ನು ಸಂಪರ್ಕಿಸಿಕೊಳ್ಳಲು ನಿರ್ದೇಶಿತ ಪ್ರತಿಫಲನದ ಚೌಕಟ್ಟನ್ನು ಸೃಷ್ಟಿಸಬಲ್ಲವು. ಇದು ಪರಿಸರವನ್ನು ಅರ್ಥ ಮಾಡಿಕೊಳ್ಳುವ ಕಡೆಗೆ ಕುತೂಹಲ/ವಿಚಾರಣೆಗೆ ಅನುವು ಮಾಡಿಕೊಡಲಿದೆ ಹಾಗು ಸಾಧ್ಯತೆಗಳನ್ನು ಮೀರಿದ ಕಲ್ಪನೆಗಳಿಗೆ ಅವಕಾಶ ನೀಡಲಿದೆ. ಈ ವಿಚಾರಣೆಯು ಇಂದ್ರಿಯಾತ್ಮಕ ಅನುಭವವನ್ನು ಸೃಷ್ಟಿಸುತ್ತದೆ.

ಇದೇನು ಎಂಬುದಕ್ಕೆ ಪ್ರತಿಕ್ರಿಯಿಸಲು ಪ್ರಸ್ತುತ ವಾಸ್ತವವೇನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿದೆ ಮತ್ತು ಅದು ವ್ಯಕ್ತಿಗಳು–ಸಮುದಾಯದ ಪ್ರತಿನಿತ್ಯದ ಬದುಕಿನ ಮೇಲೆ ಏನು ಪರಿಣಾಮ ಬೀರುತ್ತದೆ ಎನ್ನುವುದನ್ನು ಪ್ರಶ್ನಿಸಬೇಕಾಗುತ್ತದೆ. ಅರ್ಥ ಮಾಡಿಕೊಳ್ಳುವಿಕೆ ಮತ್ತು ಪ್ರಶ್ನಿಸುವಿಕೆಗಳು ಒಂದು ಇನ್ನೊಂದನ್ನು ಸಮಗ್ರಗೊಳಿಸಲು ಅಗತ್ಯವಿರುವಂಥವು. ಮುಕ್ತ ಪ್ರಶ್ನೆಗಳು ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುತ್ತವೆ. ಏಕೆಂದರೆ, ಅವು ವೈವಿಧ್ಯಮಯ ದೃಷ್ಟಿಕೋನ ಹಾಗು ವೈಯಕ್ತಿಕ ಅನುಭವಗಳಿಗೆ ಅವಕಾಶವನ್ನು ಕಲ್ಪಿಸುತ್ತವೆ. ನಿಷ್ಕ್ರಿಯ ಗ್ರಹಿಕೆಗಿಂತ ಸಕ್ರಿಯ ಪಾಲ್ಗೊಳ್ಳುವಿಕೆಯು ಪ್ರಜಾಸತ್ತಾತ್ಮಕ ಸಂಪ್ರದಾಯಗಳಿಗೆ ಬುನಾದಿ ಹಾಕುತ್ತದೆ. ಹಾಗೆಯೇ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಕ್ಕಳ ಪಾತ್ರಗಳು ಭಿನ್ನವಾಗೇನಿರುವುದಿಲ್ಲ. ಅವರ ಪ್ರಶ್ನೆಗಳು, ಧ್ವನಿಗಳು ಹಾಗೂ ಕತೆಗಳು ಕೇಳಲ್ಪಡದಿರುವುದೇ ಹೆಚ್ಚು ಹಾಗೂ ಇದರಿಂದ ಅವರ ದೃಷ್ಟಿಕೋನಗಳು ನಿರಾಕರಿಸಲ್ಪಡುತ್ತವೆ. ವಯಸ್ಕರ ಜಗತ್ತು ಅವರ ಅನುಭವಗಳ ಆಳವನ್ನು ಗೌರವಿಸುವುದಿಲ್ಲ. ಇಂಥ ಕತೆಗಳ ಪ್ರದರ್ಶನದಿಂದ ಅವರ ಧ್ವನಿಗಳು ವೈವಿಧ್ಯಮಯ ಪ್ರೇಕ್ಷಕರಿಗೆ ತಲುಪುತ್ತವೆ.

ಕತೆಗಳನ್ನು ಅನಾವರಣಗೊಳಿಸುವ ಪ್ರಕ್ರಿಯೆಯು ನಮಗೆ ಪ್ರಶ್ನೆಗಳನ್ನು ರೂಪಿಸುವ ಕ್ರಿಯೆಯ ಮೂಲಕ ಆಗಲಿದೆ. ಈ ಪ್ರಶ್ನೆಗಳು ನಮ್ಮದೇ ಕತೆಯೊಳಗೆ ನಮಗೆ ದಾರಿ ಮಾಡಿಕೊಡುತ್ತವೆ ಹಾಗು ಇನ್ನಿತರರ ಕತೆಗಳ ಜೊತೆಗೆ ಮಾರ್ದನಿ, ಸಾಮ್ಯತೆ, ವ್ಯತ್ಯಾಸಗಳು ಹಾಗು ಅಸಮ್ಮತಿಗಳ ಮೂಲಕ ಸಂಪರ್ಕ ಕಲ್ಪಿಸಲಿವೆ.

ಇಲ್ಲಿ ಆಯ್ಕೆ ಮಾಡಿಕೊಂಡ ಪಠ್ಯ 'ದುನಿಯಾ ಸಬ್‌ಕಿ', ಒಂದು ಸುಸಂಬದ್ಧ ಪ್ರಶ್ನೆಯೊಂದನ್ನು ಎತ್ತುತ್ತದೆ – ಈ ಜಗತ್ತು ಎಲ್ಲರಿಗೂ ಸೇರಿದೆಯೇ? ಪ್ರತಿಯೊಂದು ಮಗುವಿನ ಉತ್ತರ ಇನ್ನಷ್ಟು ಪ್ರಶ್ನೆಗಳ ಸರಪಳಿಗೆ ದಾರಿ ಮಾಡಿ ಕೊಡುತ್ತದೆ – 'ಎಲ್ಲರಿಗೂ ಸೇರುತ್ತದೆ/ ಸೇರುವುದಿಲ್ಲ ಎಂದು ನೀವು ಏಕೆ ಹೇಳುತ್ತೀರಿ? ನಿಮಗೆ ಯಾವಾಗಲಾದರೂ ಹೀಗೆ ಭಾವಿಸುವಂಥ ಅನುಭವ ಆಗಿದೆಯಾ?'

ಪದ್ಯವು ಉತ್ತೇಜಕವಾಗಿ ಪರಿಣಮಿಸಲಿದೆ, ವೈಯಕ್ತಿಕ ಕತೆಗಳು ಹೊಮ್ಮಲು ಅವಕಾಶವೊಂದನ್ನು ಸೃಷ್ಟಿಸಲಿದೆ. ಮಕ್ಕಳ ಅನುಭವಗಳು ವೈವಿಧ್ಯಮಯವಾಗಿರಲಿದ್ದು ಮತ್ತು ಅದರ ಮುಖ್ಯ ಪ್ರಶ್ನೆಗಳಿಂದ ಪಠ್ಯವು ಪ್ರತಿಯೊಬ್ಬರ ವಿಚಾರಣೆಗೆ ಸಾಧ್ಯತೆಗಳನ್ನು ತೆರೆಯಲಿದೆ. ಈ ಕತೆಗಳನ್ನು ಹಂಚಿಕೊಂಡಾಗ ಒಂದೇ ಬಗೆಯ ಪ್ರಶ್ನೆಗಳಿಂದ ಅದು ಸಾಮುದಾಯಿಕ ಪ್ರಜ್ಞೆಯೊಂದನ್ನು ಸೃಷ್ಟಿಸುತ್ತದೆ. ಈ ಸಾಮುದಾಯಿಕ ಪ್ರಜ್ಞೆಯೇಕೆ ಹೊಮ್ಮುತ್ತದೆ? ತದ್ವಿರುದ್ಧವಾಗಿ, ನಾವು ಈ ಜಗತ್ತಿಗೆ ಸೇರಿದವರಲ್ಲ ಎಂಬ ಭಾವನೆಯನ್ನು ಮೂಡಿಸುವ ಅನುಭವಗಳ ಸಾಮಾನ್ಯತೆಯನ್ನು ಸೃಷ್ಟಿಸಿದ ಬೃಹತ್ ವ್ಯವಸ್ಥೆ ಯಾವುದು?

ಈ ಕವನವು 'ಈ ಜಗತ್ತು ಎಲ್ಲರಿಗೂ ಸೇರಿದೆ ಇಲ್ಲವೇ ಯಾರಿಗೂ ಸೇರಿಲ್ಲ' ಎನ್ನುವ ಹೇಳಿಕೆಯ ಮೇಲೆ ನಿಂತಿದೆ. ಇದು ಎಲ್ಲರ ಹಕ್ಕನ್ನು ಪ್ರತಿಪಾದಿಸುವ ಪ್ರಯತ್ನ ಅಥವಾ ಇದು ಪ್ರಜಾಸತ್ತಾತ್ಮಕ ಪ್ರಕ್ರಿಯೆ ಅಲ್ಲವೇ ಅಲ್ಲ.

ಸಾಮುದಾಯಿಕ ಅವಕಾಶ ಮತ್ತು ಧ್ವನಿ:

ಸಮುದಾಯದ ಎಲ್ಲ ಸದಸ್ಯರು ಸಹಬಾಳ್ವೆಯ ಮಾರ್ಗಗಳ ಮೂಲಾಂಶಗಳ ಬದಲಾವಣೆ, ನಿರಾಕರಣೆ ಹಾಗು ಸೃಷ್ಟಿಯಲ್ಲಿ ತಮ್ಮ ಧ್ವನಿಯನ್ನು ಸೇರಿಸಿದಾಗ ಮಾತ್ರ ಸಾಮುದಾಯಿಕ ಚೌಕಟ್ಟು ಅಸ್ತಿತ್ವದಲ್ಲಿ ಇರುತ್ತದೆ. ವ್ಯವಸ್ಥೆಯೊಂದರಲ್ಲಿ ಒಂದು ಗುಂಪಿನ ಧ್ವನಿ ಹಾಗು ಅಭಿವ್ಯಕ್ತಿಗಳು ಉಳಿದವರನ್ನು ಹತ್ತಿಕ್ಕಿದರೆ, ಅಂಥ ವ್ಯವಸ್ಥೆಯು ಸಮುದಾಯದ ಅಭಿಪ್ರಾಯದಿಂದ ದೂರ ಸರಿಯುತ್ತದೆ. ಪ್ರಜಾಸತ್ತಾತ್ಮಕ ಆದರ್ಶಗಳು ಒಂದು ಕೊನೆಯಲ್ಲ: ಬದಲಾಗಿ, ರಾಜ್ಯ ಮತ್ತು ಅದರ ನಾಗರಿಕರ ನಡುವಿನ ಎಳೆಯುವ ತಳ್ಳುವ ನಿರಂತರ ಪ್ರಯಾಣ. ಈ ಎಳೆಯುವ–ತಳ್ಳುವ ವ್ಯವಸ್ಥಿತ ವಿಷಯಗಳು ಮತ್ತು ಸಮಷ್ಟಿಯು ಪ್ರತಿಯೊಬ್ಬ ವ್ಯಕ್ತಿಯೊಳಗಿನ ಶೋಧನೆಯಿಂದ ಬರುವಂಥವು. ಈ ಶೋಧನೆಯು ಪ್ರಸ್ತುತ ವಾಸ್ತವದ ಪರೀಕ್ಷೆ, ಭವಿಷ್ಯದ ಸಾಧ್ಯತೆಗಳ ಊಹೆ ಹಾಗು ಈ ಭವಿಷ್ಯದೆಡೆಗಿನ ಪ್ರಯಾಣವಾಗಿದೆ. ಇಂಥ ಹಲವು ಸಾಧ್ಯತೆಗಳ ಅಭಿವ್ಯಕ್ತಿಯು ಸಂವಾದ, ಸಾಮಾನ್ಯ ಅಂಶಗಳನ್ನು ಕಂಡು–ಕೊಳ್ಳುವ, ಧ್ವನಿಯೆತ್ತುವಿಕೆ ಹಾಗು ಸಂಘರ್ಷಗಳ ಮೂಲಕ ಕಾರ್ಯನಿರ್ವಹಿಸಲು ದಾರಿ ಮಾಡಿಕೊಡುತ್ತದೆ. ಇದು ಕೂಡ ಪ್ರಜಾಸತ್ತಾತ್ಮಕ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಗಳಲ್ಲಿ ಒಂದು.

ನಾಟಕವನ್ನು ಆಧರಿಸಿದ ವಿಧಾನಗಳು ಗಡಿಗಳನ್ನು ಮುಂದೆ ತಳ್ಳುವ ಪ್ರಚೋದನೆಯನ್ನು ಆಧರಿಸಿರುತ್ತವೆ. ಕಾರ್ಯಾಗಾರದಲ್ಲಿ ತೀರ ಸಾಮಾನ್ಯ ಹಾಗು ದಿನನಿತ್ಯದ ಘಟನೆಗಳ ಮರುಸೃಷ್ಟಿ ಕೂಡ ಹೊಸತನವನ್ನು ಒಳಗೊಂಡಿರುತ್ತದೆ. ಕಲ್ಪಿತ ಕನ್ನಡಿ ಮುಂದೆ ಹಲ್ಲುಜ್ಜುವುದು, ಕೈಯಲ್ಲಿ ಬ್ರಷ್‌ಅನ್ನು ಕಲ್ಪಿಸಿಕೊಳ್ಳುವುದು, ನಲ್ಲಿಯಲ್ಲಿ ಸುರಿಯುವ ನೀರನ್ನು ಊಹಿಸಿಕೊಳ್ಳುವುದು–ಇವೆಲ್ಲವೂ ಸಾಮುದಾಯಿಕ ಎಡೆಯಲ್ಲಿ ಅಸ್ತಿತ್ವದಲ್ಲಿ ಇರುವಂಥವುಗಳಲ್ಲ. ಈ ವಿಧಾನದ ಶಬ್ದಸಂಪತ್ತು ತನ್ನೊಳಗೆ ಸವಾಲನ್ನು ಒಳಗೊಂಡಿದೆ. ಸವಾಲು ವೈಯಕ್ತಿಕ ವಿಸ್ತರಣೆಯಲ್ಲಿ ಮಾತ್ರ ಇರುವಂಥದ್ದಲ್ಲ; ಬದಲಾಗಿ, ಅದನ್ನು ಸಾಮೂಹಿಕವಾಗಿ ಮಾಡಬೇಕೆಂಬ ಆಶಯದಲ್ಲಿದೆ. ಸವಾಲನ್ನು ಹಿಗ್ಗಿಸುವುದು ಗುಂಪಿಗೆ ಮಾತ್ರವಲ್ಲ, ಸುಗಮಕಾರರಿಗೂ ಅದು ಸವಾಲು. ಅವರು ಈ ಚಾಲನಕ್ರಿಯೆಯಲ್ಲಿ ತಮ್ಮ ಸ್ಥಾನದ ಶಕ್ತಿಯನ್ನು ಗುರುತಿಸಿಕೊಳ್ಳಬೇಕು ಮತ್ತು ಗುಂಪಿನಲ್ಲಿರುವವರು ವೈಯಕ್ತಿಕವಾಗಿ ಹಾಗು ಸಾಮೂಹಿಕವಾಗಿ ಏಳಿಗೆ ಹೊಂದಲು ಸ್ಥಳಾವಕಾಶವನ್ನು ಸೃಷ್ಟಿಸಬೇಕಾಗುತ್ತದೆ. ಸುಗಮಕಾರರು ಕೇಳದ ಧ್ವನಿಗಳನ್ನು ಕೇಳಿಸುವಂತೆ ಅಭಿವ್ಯಕ್ತಿಸಲು ಮುಂದೆ ತಳ್ಳುವ ಪಾತ್ರ ವಹಿಸಬೇಕು. ಈ ಪುನರ್ಬಲವು ಅಧಿಕಾರಸ್ಥರು ಎಲ್ಲರ ಧ್ವನಿಯೂ ಕೇಳಲ್ಪಡುವ ಸಾಮುದಾಯಿಕ ಅಭಿವೃದ್ಧಿಗೆ ಅವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯ ಸಾಧ್ಯತೆಯನ್ನು ಇನ್ನಷ್ಟು ತೆರೆಯುತ್ತದೆ. ಆದ್ದರಿಂದ, ಪಠ್ಯದಲ್ಲಿರುವ ಅಕ್ಬರನ ಧ್ವನಿಯು ಸುಗಮಕಾರರಿಗೆ ಒಂದು ಸೂಚನೆ (ಹಿದಾಯತ್) ಆಗಲಿದೆ.

ರಂಗಸ್ಥಳದ ಮೇಲೆ ಹಾಗು ಅದರಾಚೆಗೆ:

ಅಕ್ಬರ್ ಮತ್ತು ಬೀರಬಲ್ ನಡುವಿನ ಸಂವಾದವು ಹಲವು ವ್ಯಕ್ತಿಗಳು, ಗುಂಪುಗಳು ಹಾಗು ಸಮುದಾಯಗಳ ನಡುವಿನ ಮತ್ತು ಎರಡು ವಿಭಿನ್ನ ಭೌಗೋಳಿಕ ಪ್ರದೇಶದ ನಡುವಿನ ವಿಸ್ತೃತ ವಿನಿಮಯ ಆಗಲಿದ್ದು, ಸ್ಥಿತ್ಯಂತರದ ಹಲವು ಸಾಧ್ಯತೆಗಳನ್ನು ಸೃಷ್ಟಿಸುತ್ತದೆ. ಶ್ರೀನಗರ ಹಾಗು ಶೇಖ್ ಸರಾಯಿ ಎರಡೂ ಕಡೆ, ನಾಟಕದ ಅಂತಿಮ ಪ್ರದರ್ಶನ ದಿನದಂದು ಪಾಲ್ಗೊಂಡಿದ್ದವರ ಜೊತೆಯಲ್ಲಿ ಪೋಷಕರು ಮತ್ತು ಅವರ ಸಮವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಪ್ರೇಕ್ಷಕರು ಹಾಗು ನಟರು ಇಬ್ಬರಿಗೂ ಇದೊಂದು ಭರವಸೆಯ ಕ್ಷಣವಾಗಿತ್ತು. ಪ್ರದರ್ಶನವು ನಟರಿಗೆ ಈವರೆಗೆ ಹೇಳದೆ ಉಳಿದ ಕತೆಗಳನ್ನು ಅಭಿವ್ಯಕ್ತಿಗೊಳಿಸುವ ವಿಶ್ವಾಸದ ಜಗಿತವಾಗಿದ್ದರೆ, ತಮಗೆ ಗೊತ್ತಿದ್ದವರ ಈವರೆಗೆ, ಕೇಳದ ಕತೆಗಳಿಗೆ ಪ್ರೇಕ್ಷಕರು ಸಾಕ್ಷಿಯಾಗಿದ್ದರು. ಪ್ರೇಕ್ಷಕರು ಮತ್ತು ನಟರು, ರಂಗಸ್ಥಳದ ಮೇಲೆ ತೆರೆದುಕೊಂಡ ಕತೆಗಳ ಬಗ್ಗೆ, ಮಾತಿನಲ್ಲಿ ವ್ಯಕ್ತಪಡಿಸಲಾಗದ ವಿಶ್ವಾಸ ಹೊಂದಿದ್ದರು. ಇಬ್ಬರೂ ಮಾತಿಗೆ ನಿಲುಕದ ರೂಪಾಂತರಕ್ಕೆ, ಬದಲಾವಣೆಗೆ ಒಳಗಾದರು. ಇದು ಪ್ರಜಾಸತ್ತಾತ್ಮಕ ಸಂವಾದದ ಪ್ರಗತಿಯಾಗಿತ್ತು.


ಸಮುದಾಯ ಗ್ರಂಥಾಲಯ ಯೋಜನೆಯಲ್ಲಿ (Community Library Project)ಮೊದಲ ಬಾರಿಗೆ ತನ್ನ ಮಗಳನ್ನು ರಂಗದ ಮೇಲೆ ಕಂಡ ತಾಯಿ, ಮಗಳು ವಹಿಸಿದ್ದ ಲಿಂಗಭೇದ ವಿವರಿಸುವ ಪಾತ್ರವನ್ನು ಕಂಡು ಆತ್ಮಾವಲೋಕನ ಮಾಡಿಕೊಳ್ಳುತ್ತ ಮನೆಗೆ ತೆರಳಿದಳು. ದಿಲ್ಲಿ ಪಬ್ಲಿಕ್ ಶಾಲೆಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು, ಹೊರಗುಳಿಸುವ ಇನ್ನೊಂದು ರೂಪವಾದ ಹಾಗು ಅಧಿಕಾರ ಮತ್ತು ಬಲದ ಅಸಮಾನತೆಯನ್ನು ತೋರಿಸುವ ಕೀಟಲೆ ಕುರಿತ ಕತೆಗೆ ಪ್ರತಿಧ್ವನಿಸಿದರು. ಎರಡೂ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಮಕ್ಕಳು ತಮ್ಮ ಕಥೆಗಳೊಡನೆ ಹಾಗು ಅವು ತಮ್ಮ ಮೇಲೆ ಯಾವ ಪ್ರಭಾವ ಬೀರಿವೆ ಎಂಬುದರ ಬಗ್ಗೆ ಆತ್ಮಾವಲೋಕನ ನಡೆಸಿದರು. ಈ ಕತೆಗಳನ್ನು ಜೊತೆಯಾಗಿ ಹೇಳುವ ಭಾಷೆ ಅವರಿಗೆ ದಕ್ಕಿತ್ತು. ಅವರು ಬದುಕುವ ಬಯಕೆಯುಳ್ಳ ವಿಭಿನ್ನ ಕತೆಗಳನ್ನು ವಿಭಿನ್ನ ವಾಸ್ತವಗಳನ್ನು ರಂಗದ ಮೇಲೆ ಅಭಿವ್ಯಕ್ತಿಸಿದ್ದರು.

ಉಪಸಂಹಾರ

ನಾಗರಿಕರಾಗುವಿಕೆಯ ಪ್ರಕ್ರಿಯೆಯು ಮತ ಚಲಾವಣೆಯ ಹಕ್ಕಿನಿಂದಷ್ಟೇ ಆರಂಭವಾಗುವುದಿಲ್ಲ. ಅದು ಪ್ರತಿಯೊಬ್ಬ ವ್ಯಕ್ತಿಯ ದಿನನಿತ್ಯದ ಬದುಕು ಹಾಗು ಆ ಅನುಭವಗಳೊಟ್ಟಿಗೆ ಅವರ ತೊಡಗಿಸಿಕೊಳ್ಳುವಿಕೆಯಿಂದ ಆರಂಭವಾಗುತ್ತದೆ. ವ್ಯಕ್ತಿಯೊಬ್ಬನ ಅಸ್ಮಿತೆಯ ಪ್ರಜ್ಞಾಪೂರ್ವಕ ಪರಿಶೀಲನೆ ಹಾಗು ಅವರಿಗೆ ಮಾತ್ರ ಅಂಟಿಕೊಂಡ ಕತೆಗಳು ಸಕ್ರಿಯ ನಾಗರಿಕತ್ವದ ಆರಂಭ. ಈ ಪ್ರಕ್ರಿಯೆಯನ್ನು ಆರಂಭಿಸಲು ಸಂವಾದ ಮತ್ತು ಪದಗಳು ಮಾತ್ರ ಸಾಲುವುದಿಲ್ಲ. ತಮ್ಮ ಅಸ್ಮಿತೆಯನ್ನು ಬೆಳೆಸಿಕೊಳ್ಳುತ್ತಿರುವ ಮಕ್ಕಳು, ನಾಟಕದ ಮೂಲಕ ಈಗಾಗಲೇ ಈ ಶೋಧನೆಯನ್ನು ಆರಂಭಿಸಿದ್ದಾರೆ. ಸಂಕೀರ್ಣ ವಾಸ್ತವದ ಅರ್ಥವನ್ನು ಈ ನಾಟಕಕ್ರಿಯೆಯ ಮೂಲಕ ಕಂಡುಕೊಳ್ಳುತ್ತಾರೆ. ಮಗುವಿನ ಜಗತ್ತಿನಲ್ಲಿ ಕತೆಗಳು ಚಲನಶೀಲವಾಗಿರುತ್ತವೆ ಮತ್ತು ಅವುಗಳನ್ನು ಬದಲಿಸುವ ಸಾಧ್ಯತೆಗಳು ಇರುತ್ತವೆ. ನಾಟಕವನ್ನು ಆಧರಿಸಿದ ವಿಧಾನಗಳು ಕ್ರೀಡೆ ಹಾಗು ನಿರ್ದೇಶಿತ ಶೋಧನೆಯನ್ನು ಸಾಧನವಾಗಿ ಬಳಸಿಕೊಂಡು, ಕತೆಗಳ ಮೂಲಕ ಅಗೋಚರ ಮುಖವನ್ನು ನೋಡಲು ಮಕ್ಕಳಿಗೆ ನೆರವಾಗುತ್ತವೆ. ಕತೆಗಳನ್ನು ಸೃಷ್ಟಿಸುವ ಪ್ರಕ್ರಿಯೆಯು ಅನೇಕ ದೃಷ್ಟಿಕೋನಗಳನ್ನು ಗೋಚರಕ್ಕೆ ತರುತ್ತದೆ. ರಂಗದಲ್ಲಿ ಪ್ರದರ್ಶನ ನೀಡುವಿಕೆಯು ಆಲೋಚನೆಗಳನ್ನು ಕ್ರಿಯಾಶೀಲಗೊಳಿಸುತ್ತದೆ: ಪ್ರತಿದಿನದ ಜೀವನದಲ್ಲಿ ಉದ್ದೇಶಪೂರ್ವಕ ಕ್ರಿಯೆಯ ಸಾಧ್ಯತೆಗಳನ್ನು ಊಹಿಸಿಕೊಳ್ಳಲು ಪ್ರದರ್ಶನಕಾರರಿಗೆ ನೆರವಾಗುತ್ತದೆ. ಆಶಿಸಿದ ವಾಸ್ತವವನ್ನು ರೂಪಿಸಿಕೊಳ್ಳುವಲ್ಲಿ ಇಂಥ ಕ್ರಿಯೆಯು ಮೊದಲ ಹೆಜ್ಜೆ ಆಗಿದೆ.



ಸನ್ಯುಕ್ತಾ ಸಹಾ, ಆಗಾಝ್ ಥಿಯೇಟರ್ ಟ್ರಸ್ಟ್‌ನ ಸಂಸ್ಥಾಪಕಿ ಮತ್ತು ಅನ್ವಯಿಕ ರಂಗಭೂಮಿಯಲ್ಲಿ ವೃತ್ತಿನಿರತೆ. ರಂಗಭೂಮಿ, ಸಾಮಾಜಿಕ ಕಾರ್ಯ ಮತ್ತು ಮಾನಸಿಕ ಆರೋಗ್ಯ–ಸೌಖ್ಯದ ನಡುವಿನ ಸಂಬಂಧಗಳ ಬಗ್ಗೆ ಕುತೂಹಲ. ಇಮೇಲ್: sanyuktha@aagaaztheatre.org



ದೇವಿಕಾ ಬೇಡಿ, ದಿಲ್ಲಿಯಲ್ಲಿ ನೆಲೆಸಿರುವ ಕಲಾ ಶಿಕ್ಷಕಿ ಹಾಗು ಸುಗಮಗಾರ್ತಿ. ಸಮುದಾಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮಕ್ಕಳು ಮತ್ತು ಯುವಜನರ ಜೊತೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಅವರು ಕಲೆಯನ್ನು ನಾನಾ ಅವಕಾಶಗಳಲ್ಲಿ ಬಳಸಿಕೊಂಡು, ವ್ಯಕ್ತಿಯು ಸ್ವಯಂನ್ನು ಅರ್ಥಮಾಡಿಕೊಳ್ಳುವ ಮೂಲಕ ಇನ್ನಷ್ಟು ಉದ್ದೇಶಪೂರ್ವಕ ಹಾಗು ಪ್ರಜ್ಞಾಪೂರ್ವಕ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಬಹುದು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇಮೇಲ್: devika@ aagaaztheatre.org

ಅನುವಾದ: **ಮಾಧವ ಐತಾಳ** । ಪರಿಶೀಲನೆ: **ನಾಗಮಣಿ ಎಸ್.ಎನ್.**